# ದೋಸಾ ಮ್ಯಾನ್

■ ಪ್ರವೀಣ ಕುಲಕರ್ಣಿ




'ಇಂಗಿನ ಕಹಿ, ಮೆಂತ್ಯದ ಒಗಚು, ಹಸಿಶುಂಠಿ, ಹಸಿಮೆಣಸಿನ ಕಾಯಿ, ಮೆಣಸುಗಳ ವಿಶಿಷ್ಟವಾದ ಖಾರ, ಪಲ್ಯದ ಕಾಯಿಗಳ ವಿವಿಧ ಮಾಧುರ್ಯ, ಹಿಟ್ಟುಗಳ ಹುದುಗಿನ ಹಿತವಾದ ಹುಳಿ, ತುಪ್ಪದ ಕಂಪು, ಬೆಣ್ಣೆಯ ವಿಪುಲಾರ್ದತೆ– ಈ ಸಮೃದ್ಧ ರಸಗಳನ್ನು ಹೊಂದಿಸಿ, ಸುತ್ತಲೂ ಕೆನ್ನಾಲಗೆಯನ್ನು ಚಾಚಿ ಕಾವಲಿಯ ಮೇಲಿರುವ ಭಕ್ಷ್ಯವನ್ನು ರುಚಿ ನೋಡಲು ಹವಣಿಸುವ ಅಗ್ನಿದೇವನನ್ನು ನೀರಿನಿಂದ ದಟ್ಟಿಸುತ್ತಾ, ಕಣ್ಣಿಗೆ ನಾಲಗೆಯ ಹರಿತವನ್ನು ಕೊಟ್ಟು ಒಂದು ಕ್ಷಣವೂ ಹಿಂಚುಮುಂಚಿಲ್ಲದಂತೆ ಸಿದ್ಧ ಕ್ಷಣದಲ್ಲಿ ಎಲೆಗಿಳಿಸುವ ಕುಶಲ ಬಾಣಸಿಗನ ಕುಶಲ ಕೃತಿ ಈ ಮಸಾಲೆ ದೋಸೆ'.

ಪು.ತಿ.ನ. ಅವರು ಹೀಗೆ ಹೇಳುವಾಗ ನ್ಯೂಯಾರ್ಕ್‌ನ 'ದೋಸಾ ಮ್ಯಾನ್' ಏನೂ ಅವರ ಮನಸಿನಲ್ಲಿ ಇರಲಿಲ್ಲ. ಆದರೆ, ಪು.ತಿ.ನ. ಅವರು ಹೀಗೆ ಹೇಳಿದ್ದೇ ಈ ಬಾಣಸಿಗನನ್ನು ಉದ್ದೇಶಿಸಿ ಎನ್ನುವಂತೆ ಕಂದಸ್ವಾಮಿ ತಿರುಕುಮಾರ್ ನ್ಯೂಯಾರ್ಕ್‌ನ ಸುಪ್ರಸಿದ್ಧ ವಾಷಿಂಗ್ಟನ್ ಪಾರ್ಕ್ ಸ್ಕ್ವೇರ್‌ನ ತಳ್ಳುವ ಗಾಡಿಯಲ್ಲಿ ದೋಸೆ ಹುಯ್ಯುತ್ತಾರೆ. ಕಾದ ಕಾವಲಿಯ ಮೇಲೆ ತಣ್ಣೀರು ಚಿಮುಕಿಸಿ, ಎದ್ದ ಹಬೆಯೊಳಗೆ ಹಿಟ್ಟು ಹಾಕಿ, ಗಿರ್ರೆಂದು ತಿರುಗಿಸಿ, ಮೇಲೊಂದಿಷ್ಟು ಅಭ್ಯಂಜನ ಮಾಡಿಸಿಕೊಂಡು ತಟ್ಟೆಗೇರುವ ತಿರುಕುಮಾರ್ ಅವರ ದೋಸೆಯ ವೈಭವದ ಮೇಲೆ ಲೆಕ್ಕವಿಲ್ಲದಷ್ಟು ಮಂದಿ ಸಾಕ್ಷ್ಯಚಿತ್ರಗಳನ್ನು ನಿರ್ಮಾಣ ಮಾಡಿದ್ದಾರೆ. ಅವುಗಳನ್ನು ನೋಡುತ್ತಾ ಹೋದರೆ, ನಮ್ಮ ಬೆಂಗಳೂರಿನಲ್ಲಿಯೂ ಇಂತಹ ಹೈಟೆಕ್ ಆದ ತಳ್ಳುವ ಗಾಡಿಯಲ್ಲಿ ನಾವೂ ಒಂದು ದೋಸೆ ತಿನ್ನುವ ಅವಕಾಶವಿದೆಯೇ ಎಂದು ಬಾಯಲ್ಲಿ ಲಾವಾರಸ ಉಕ್ಕಿ ಹರಿಯುತ್ತದೆ. ತಳ್ಳುವ ಗಾಡಿಯ ಈ ದೋಸಾ ಮ್ಯಾನ್, ಸ್ವಂತ ಮನೆ ಮಾಡಿದ್ದಾರೆ. ಮಗಳನ್ನು ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಓದಿಸಿದ್ದಾರೆ. ಐಷಾರಾಮಿ ಕಾರು ಇಟ್ಟಿದ್ದಾರೆ. ತಳ್ಳುವ ಗಾಡಿಯ ವ್ಯಾಪಾರಿಗಳು ಯಾವ ಎತ್ತರಕ್ಕೆ ಏರಬಹುದು ಎಂಬುದನ್ನು ನಿರೂಪಿಸಿ ತೋರಿಸಿದ್ದಾರೆ.

ಅಮೆರಿಕನ್ನರಿಗೆ ದೋಸೆಯ ರುಚಿ ತೋರಿಸಿರುವ ಈ ನಮ್ಮ ತಿರುಕುಮಾರ್ ಅವರು ಶ್ರೀಲಂಕಾದ ಜಾಫ್ನಾದವರು. 1990ರ ದಶಕದಲ್ಲಿ ಆ ದೇಶ ಆಂತರಿಕ ದಳ್ಳುರಿಯಲ್ಲಿ ಹೊತ್ತಿ ಉರಿಯುವಾಗ ಭವಿಷ್ಯ ಅರಸಿ ತಿರುಕುಮಾರ್ ಅವರು ಬಂದಿದ್ದು ಅಮೆರಿಕಕ್ಕೆ. ಕಟ್ಟಡ ನಿರ್ಮಾಣ ವಲಯದಲ್ಲಿ ಕಾರ್ಮಿಕನಾಗಿ ದುಡಿದ ಅವರು, ಬಳಿಕ ಗ್ಯಾಸ್ ಸ್ಟೇಷನ್‌ವೊಂದರಲ್ಲಿ ಕೆಲಸಕ್ಕೆ ನಿಂತರು. ಮುಂದೆ ಫ್ಯಾಕ್ಟರಿಯೊಂದರಲ್ಲಿ ಕೆಲಕಾಲ ಕೆಲಸ ಮಾಡಿದ ಅವರು, ಕೊನೆಗೆ ದೋಸೆ ಹಿಟ್ಟು ಹುಯ್ಯುವ ಸೌಟು ಹಿಡಿಯಲು ನಿರ್ಧರಿಸಿದರು. ಚಿಕ್ಕವಯಸ್ಸಿನಲ್ಲಿ ಅಜ್ಜಿ ಕಟ್ಟಿಗೆಯ ಒಲೆಯ ಮೇಲೆ ಹುಯ್ದು ಕೊಡುತ್ತಿದ್ದ ವಿಧ ವಿಧ ದೋಸೆಗಳನ್ನು ಕಣ್ಣರಳಿಸಿ ನೋಡುತ್ತಾ, ಬಾಯಲ್ಲಿ ಉಕ್ಕಿ ಹರಿಯುತ್ತಿದ್ದ ನೀರಿನೊಂದಿಗೆ ಹೊಟ್ಟೆಗೆ ಇಳಿಸುತ್ತಾ ಬೆಳೆದಿದ್ದ ತಿರುಕುಮಾರ್, 'ಎನ್‌ವೈ ದೋಸಾಸ್' ಎಂಬ ತಳ್ಳುವ ಗಾಡಿಯನ್ನು ರಸ್ತೆಗಿಳಿಸಿದರು. 2001ರಲ್ಲಿ ಹೀಗೆ ಶುರುವಾದ ಎನ್‌ವೈ ದೋಸಾಸ್ ಯಾತ್ರೆ ವರ್ಷದಿಂದ ವರ್ಷಕ್ಕೆ ಹೊಸ ಮೈಲಿಗಲ್ಲು ಸ್ಥಾಪಿಸುತ್ತಾ ಮುನ್ನಡೆದಿದೆ. ಅವರ ದೋಸಾ ಬಂಡಿಯ ವಿಡಿಯೊಗಳನ್ನು ಕೋಟ್ಯಂತರ ಮಂದಿ ವೀಕ್ಷಿಸಿದ್ದಾರೆ. ನ್ಯೂಯಾರ್ಕ್ ಟೈಮ್ಸ್, ವಾಷಿಂಗ್ಟನ್ ಪೋಸ್ಟ್ ಸೇರಿದಂತೆ ಜಗತ್ತಿನ ಹಲವು ಪತ್ರಿಕೆಗಳು ಈ ದೋಸಾ ಮ್ಯಾನ್ ಕುರಿತು ಪುಟಗಟ್ಟಲೆ ಲೇಖನ ಪ್ರಕಟಿಸಿವೆ. ಅಮೆರಿಕ ಮಾತ್ರವಲ್ಲದೆ ಜಪಾನ್, ಇಂಗ್ಲೆಂಡ್, ಫ್ರಾನ್ಸ್ ಸೇರಿದಂತೆ ಹಲವು ದೇಶಗಳ ಮಾಧ್ಯಮಗಳು ತಿರುಕುಮಾರ್ ಅವರ ಯಶೋಗಾಥೆಯನ್ನು ಮೊಗೆದು ಪ್ರಕಟಿಸಿವೆ. ನ್ಯೂಯಾರ್ಕ್‌ನ 'ಬೆಸ್ಟ್ ಸ್ಟ್ರೀಟ್ ಫುಡ್' ಪ್ರಶಸ್ತಿಯೂ ಇವರ ದೋಸೆಗೆ ಸಂದಿದೆ.

'ನಾನು ದೋಸೆ ಮಾಡಿ ಮಾರುತ್ತೇನೆ' ಎಂದು ತಿರುಕುಮಾರ್ ಹೇಳಿದಾಗ, 'ಸ್ವಂತ ಊರಿನಿಂದ ಬಹುದೂರ ಬಂದಿದ್ದೀಯಾ. ಸುಮ್ಮನೇ ಸಿಕ್ಕ ಕೆಲಸ ಮಾಡು. ಇಲ್ಲಿ ನಿನ್ನ ದೋಸೆ ತಿನ್ನುವವರು ಯಾರು? ಸುಮ್ಮನೆ ಕೈಸುಟ್ಟುಕೊಳ್ಳುತ್ತೀಯಾ' ಎಂದು ನೂರಾರು ಮಂದಿ ಅವರಿಗೆ ಬುದ್ಧಿ ಹೇಳಿದರಂತೆ. ಆದರೆ, ಈ ದೋಸಾ ಮ್ಯಾನ್ ತಮ್ಮ ಹಟ ಬಿಡಲಿಲ್ಲ. ದೋಸೆಯ ಕಾವಲಿ ಅಂಟಿಸಿದ ಗಾಡಿಯೊಂದಿಗೆ ಅದೊಂದು ದಿನ ರಸ್ತೆಗೆ ಇಳಿದೇ ಬಿಟ್ಟರು. ಕೊರಳಲ್ಲಿ ರುದ್ರಾಕ್ಷಿ ಮಾಲೆ, ಮೂಗಿನ ಕೆಳಗೆ ದಪ್ಪ ಮೀಸೆಯ ಈ ಮನುಷ್ಯ, ತಮ್ಮ ಬಳಿಗೆ ಬಂದವರನ್ನು ಅತ್ಯಂತ ಪ್ರೀತಿಯಿಂದ ಮಾತನಾಡಿಸುತ್ತಾರೆ. 'ಪ್ಲೀಸ್ ಟೆಲ್ ಮೀ, ವಾಟ್ ಐ ಹ್ಯಾವ್ ಟು ಪ್ರಿಪೇರ್ ಫಾರ್ ಯು' ಎಂದು ಕೇಳಿದರೆ, ಅವರ ಪ್ರೀತಿಗೆ ಎಂಥವರೂ ಮಾರು ಹೋಗಬೇಕು. ಅಂದಹಾಗೆ, ಭಾರತ ಹಾಗೂ ಶ್ರೀಲಂಕಾದಿಂದ ಅಮೆರಿಕಕ್ಕೆ ಕಲಿಯಲು ಬಂದ ವಿದ್ಯಾರ್ಥಿಗಳಿಗೆ ಈ ದೋಸಾ ಮ್ಯಾನ್‌ನಿಂದ 'ಹೆಚ್ಚುವರಿ ಪ್ರೀತಿ' ಇದೆ. ಕಡಿಮೆ ಬೆಲೆಗೆ, ಕೆಲವೊಮ್ಮೆ ಹಣ ಇಲ್ಲದಿದ್ದರೂ ಹೊಟ್ಟೆ ತುಂಬಾ ದೋಸೆ ತಿನ್ನಿಸಿ ಕಳಿಸುತ್ತಾರೆ.

ತಿರುಕುಮಾರ್ ಅವರ ಮಾತೃಭಾಷೆ ತಮಿಳು. ತಮಿಳು ಮಾತನಾಡುವವರು ಸಿಕ್ಕರಂತೂ ಅವರ ಖುಷಿಗೆ ಪಾರವೇ ಇರುವುದಿಲ್ಲ. ಎನ್‌ವೈ ದೋಸಾಸ್‌ಗೆ ಬಂದ ಮುಕ್ಕಾಲು ಪಾಲು ಜನ ಪಾಂಡಿಚೇರಿ ಸ್ಪೆಷಲ್ ದೋಸೆಯನ್ನೇ ಕೇಳುತ್ತಾರೆ. ತಿರುಕುಮಾರ್ ಅವರು ಈ ದೋಸೆಯನ್ನು ಹುಯ್ಯುವ ಶೈಲಿ ಕಂಡಾಗ ಇಲ್ಲಿ ಕುಳಿತ ನಮ್ಮ ಬಾಯಿಯಲ್ಲೂ ನೀರೂರುತ್ತದೆ. ನುಗ್ಗೆಕಾಯಿ ಸಾಂಬಾರ್, ಕಾಯಿ ಚಟ್ನಿ, ಆಲೂ ಪಲ್ಯದ 'ಪಕ್ಕವಾದ್ಯ'ವೂ ಈ ದೋಸಾ ಮ್ಯಾನ್‌ನ ದೋಸೆಯ ಕಛೇರಿಗೆ ಸಾಥ್ ನೀಡುತ್ತದೆ!

ಎಕ್ಸ್ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಕ್ರಿಯಾಶೀಲವಾಗಿರುವ ತಿರುಕುಮಾರ್, ತಾವು ಎಂದು ಬರುವುದಿಲ್ಲವೋ ಅದನ್ನು ಮುಂಚಿತವಾಗಿ ತಮ್ಮ ಗ್ರಾಹಕರಿಗೆ ತಿಳಿಸುತ್ತಾರೆ. ಗ್ರಾಹಕರ ಮೇಲಿನ ಅವರ ಕಾಳಜಿ ಪ್ರಶ್ನಾತೀತ. ವರ್ಷಕ್ಕೊಮ್ಮೆ ಬಿಡುವು ಮಾಡಿಕೊಂಡು ಅವರು ಭಾರತಕ್ಕೂ ಬರುತ್ತಾರೆ. ರಾಮೇಶ್ವರಂ ಅವರ ನೆಚ್ಚಿನ ಯಾತ್ರಾಕ್ಷೇತ್ರವಂತೆ. ನ್ಯೂಯಾರ್ಕ್‌ನ ವಾಷಿಂಗ್ಟನ್‌ನ ಪಾರ್ಕ್ ಸ್ಕ್ವೇರ್‌ಅನ್ನು ತಮ್ಮ ದೋಸೆಯ ಮೂಲಕ ಒಂದು ಯಾತ್ರಾಕ್ಷೇತ್ರವನ್ನಾಗಿಸಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65